**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ನ್ಯಾಯಾಲಯದಲ್ಲಿ</u>**

**<u>ಸಿಸಿ ನಂ. 436/2026</u>**

| **ಪಿರ್ಯಾದುದಾರರು :** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀ.ಪರಮೇಶ್ವರಪ್ಪ<br>ಬಿನ್ ರಾಜಪ್ಪ,<br>ವಯಸ್ಸು: 40 ವರ್ಷ,<br>ವಾಸಃ ತೋಪೇನಹಳ್ಳಿ ಗ್ರಾಮ,<br>ಸಂತೆಬೆನ್ನೂರು 1 ನೇ ಹೋಬಳಿ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. | | ಶ್ರೀ.ಮೋಹನ ದಾಸ್ ಎಂ, ಪಿಡಿಒ,<br>ವಾಸಃ ಸುಪ್ರಿತ ನಿಲಯ,<br>ಸೂರ್ಯಪುತ್ರ ಸರ್ಕಲ್,<br>4 ನೇ ಕ್ರಾಸ್ ರುಪ್ಸೆ ಬ್ಯೂಟಿ ಪಾರ್ಲರ್,<br>ಚಿತ್ರದುರ್ಗ ಸಿಟಿ ಮತ್ತು ಜಿಲ್ಲೆ. |

ನಾನು ಶ್ರೀಮತಿ. ಮಹಾಲಕ್ಷ್ಮಿ ಜಿ. ಎಂ.ಎ., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿಯಾದ ನಿನ್ನನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

**<u>-: ಆಪಾದನೆ :-</u>**

ಆರೋಪಿಯಾದ ನೀನು ಪಿರ್ಯಾದುದಾರರಿಂದ ದಿನಾಂಕ 10.06.2023 ರಂದು ಗೃಹಕೃತ್ಯದ ಸಲುವಾಗಿ ರೂಃ 9,90,000/- ಮಾಹೆಯಾನ ಶೇಕಡ 2% ರಂತೆ ಹಣವನ್ನು ಸಾಲವಾಗಿ ಪಡೆದುಕೊಂಡು ಅದರ ತೀರುವಳಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಿತ್ರದುರ್ಗ ಶಾಕೆಯ ನಿಮ್ಮ ಖಾತೆಗೆ ಸಂಬಂಧಿಸಿದ, ದಿನಾಂಕಃ 16.06.2025 ರ ಪೋಸ್ಟ್ ಡೇಟೆಡ್ ಚೆಕ್ ಸಂಖ್ಯೆ 066102 ನ್ನು ನೀಡಿದ್ದು, ಅದನ್ನು ಪಿರ್ಯಾದುದಾರರು ದಿಃ 16.06.2025 ರಂದು ತನ್ನ ಖಾತೆಯಾದ ಕೆನರ ಬ್ಯಾಂಕ್, ಸಂತೆಬೆನ್ನೂರು ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ 23.06.2025 ರಂದು ಹಿಂದಿರುಗಿಸಲ್ಪಟ್ಟಿರುತ್ತದೆ. ಆದ್ದರಿಂದ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 25.06.2025 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ನೀವು ಸ್ವೀಕರಿಸಿದ್ದು ಸದರಿ ಸಾಲದ ಹಣವನ್ನು ಹಿಂದಿರುಗಿಸಿರುವುದಿಲ್ಲ. ಆದ್ದರಿಂದ, ಕಲಂ.138 ನೆಗೋಷಿಯಬಲ್ ಕಾಯ್ದೆ ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾಧಿಸಿದೆ.

ಸಹಿ/-

**ದಿನಾಂಕಃ 21.04.2026** — **ಸಿ/ಸಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಸ್ಥಳಃ ಚನ್ನಗಿರಿ.** — **ಜೆಎಮ್ಎಫ್‌ಸಿ ನ್ಯಾಯಾಲಯ, ಚನ್ನಗಿರಿ.**